SEPTEMBER 26, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**'ಸಶಕ್ತ ಮಹಿಳೆ - ಸುಸ್ಥಿರ ಕೃಷಿ'** ಧ್ಯೇಯದ, ಧಾರವಾಡ ಕೃಷಿ ಮೇಳಕ್ಕೆ, ಇಂದು ಬೆಳಗ್ಗೆ 11 ಗಂಟೆಗೆ, ರಾಜ್ಯ ಮುಖ್ಯ ಕಾರ್ಯದರ್ಶಿ ಡಾಕ್ಟರ್ ಶಾಲಿನಿ ರಜನೀಶ, ಚಾಲನೆ.

**ಕೃಷಿಕ ಮಹಿಳೆಯರ** ಸಮಗ್ರ ಮಾರ್ಗದರ್ಶನಕ್ಕೆ, ಪ್ರತಿ ಗ್ರಾಮದಲ್ಲಿ 'ಕೃಷಿ ಸಖಿಯರು' – ಧಾರವಾಡ ಜಿಲ್ಲಾಧಿಕಾರಿ, ಆರ್. ಸ್ನೇಹಲ್,

**"ಸುರಕ್ಷಿತ ಮಾತೃತ್ವ ಆಶ್ವಾಸನ – SUMAN Roadmap 2030"** – ತಾಯಂದಿರ ಮರಣ ಪ್ರಮಾಣ ಶೂನ್ಯಕ್ಕಿಳಿಸುವುದು, ಆರೋಗ್ಯ ಇಲಾಖೆ ಗುರಿ.

**ಮನ್ ಕಿ ಬಾತ್;** ನಾಳೆ ಬೆಳಗ್ಗೆ 11 ಗಂಟೆಗೆ, 138ನೇ ಸಂಚಿಕೆ ಪ್ರಸಾರ.

<><><>

**ಈಗ ವಾರ್ತೆಗಳ ವಿವರ**

<><><>

**ಬೀಜ ತಳಿ ಸಂರಕ್ಷಣೆ ಹಾಗೂ** ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಮಹತ್ವದ್ದು ಎಂದು ಧಾರವಾಡ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊಫೆಸರ್ ಆರ್.ಆರ್. ಹಂಚಿನಾಳ ಹೇಳಿದರು. 'ಸಶಕ್ತ ಮಹಿಳೆ - ಸುಸ್ಥಿರ ಕೃಷಿ' ಧ್ಯೇಯದೊಂದಿಗೆ, ನಾಲ್ಕು ದಿನಗಳ ರೈತ ಜಾತ್ರೆಯ ಬೀಜ ಮೇಳಕ್ಕೆ ಅವರು ಚಾಲನೆ ನೀಡಿ, ಮಾತನಾಡಿದರು.

<><><>

**ಪ್ರೊಫೆಸರ್ ಆರ್.ಆರ್ ಹಂಚಿನಾಳ ಧ್ವನಿ– 31 ಸೆಕೆಂದುಗಳು**

<><><>

**ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ, ಡಾಕ್ಟರ್** ಎನ್.ಬಿ.ಪ್ರಕಾಶ ಮಾತನಾಡಿ, ಕೃಷಿ ವಿಶ್ವವಿದ್ಯಾಲಯದಲ್ಲಿ, ಬೀಜ ಘಟಕ ಸ್ಥಾಪನೆಯಾಗಿ, 25 ವರ್ಷಗಳು ಕಳೆದಿವೆ. ಬೀಜ ಘಟಕ, ಹೊಸ ದಿಲ್ಲಿಯ ಭಾರತೀಯ ಕೃಷಿ ಸಂಶೋಧನಾ ಮಂಡಳಿಯಿಂದ, 2013 ಮತ್ತು 2020 ರಲ್ಲಿ ರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಗಿದೆ. ಶೇಂಗಾ ತಳಿಗೆ ಅಂತರಾಷ್ಟ್ರೀಯ ಪುರಸ್ಕಾರ ದೊರೆತಿದೆ ಎಂದರು. ಇಂದು ಬೆಳಗ್ಗೆ 11 ಗಂಟೆಗೆ, ರಾಜ್ಯ ಮುಖ್ಯ ಕಾರ್ಯದರ್ಶಿ ಡಾಕ್ಟರ್ ಶಾಲಿನಿ ರಜನೀಶ, ಕೃಷಿ ಮೇಳವನ್ನು ಉದ್ಘಾಟಿಸಲಿದ್ದಾರೆ.

<><><>

**ರಾಷ್ಟ್ರೀಯ ಗ್ರಾಮೀಣ** ಜೀವನೋಪಾಯ ಅಭಿಯಾನ –N.R.L.M. ಯೋಜನೆ ಅಡಿ, ರಾಜ್ಯದಲ್ಲಿ, 3 ಲಕ್ಷದ 14 ಸಾವಿರ ಸ್ವಸಹಾಯ ಸಂಘಗಳನ್ನು ನೋಂದಾಯಿಸಲಾಗಿದ್ದು, 32 ಲಕ್ಷಕ್ಕೂ ಹೆಚ್ಚು ಕೃಷಿಕ ಮಹಿಳೆಯರು ಸಕ್ರಿಯರಾಗಿದ್ದಾರೆ ಎಂದು, ಧಾರವಾಡ ಜಿಲ್ಲಾಧಿಕಾರಿ ಆರ್.ಸ್ನೇಹಲ್ ತಿಳಿಸಿದ್ದಾರೆ. ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಆಯೋಜಿಸಿರುವ, ನಾಲ್ಕು ದಿನಗಳ ಕೃಷಿ ಮೇಳದ, ಮೊದಲ ದಿನವಾದ ನಿನ್ನೆ, 'ಕೃಷಿಯಲ್ಲಿ ರೈತ ಮಹಿಳೆಯರ ಮಹತ್ವ ಮತ್ತು ಸಬಲೀಕರಣ' ವಿಚಾರಗೋಷ್ಠಿಯಲ್ಲಿ, ಅವರು ಮಾತನಾಡಿದರು. ಕೃಷಿಕ ಮಹಿಳೆಯರಿಗೆ, ಕೃಷಿ ತರಬೇತಿ, ಬ್ಯಾಂಕ್ ಸಾಲ ಸೌಲಭ್ಯ, ಮಾರುಕಟ್ಟೆ ಅವಕಾಶ ಹಾಗೂ ತಂತ್ರಜ್ಞಾನದ ಬಗ್ಗೆ ಮಾಹಿತಿ ನೀಡಲು, ಪ್ರತಿಯೊಂದು ಹಳ್ಳಿಯಲ್ಲಿ 'ಕೃಷಿ ಸಖಿ'ಯರನ್ನು ನಿಯೋಜಿಸಲಾಗಿದೆ ಎಂದರು.

<><><>

**ತಾಯಂದಿರ** ಮರಣ ಪ್ರಮಾಣವನ್ನು ಶೂನ್ಯಕ್ಕಿಳಿಸುವುದು, ರಾಜ್ಯ ಸರ್ಕಾರದ ದೃಢ ಸಂಕಲ್ಪ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ಯು.ಟಿ ಖಾದರ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ "ಸುರಕ್ಷಿತ ಮಾತೃತ್ವ ಆಶ್ವಾಸನ – SUMAN Roadmap 2030" ರಾಜ್ಯ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು. ಗರ್ಭಪೂರ್ವ ಆರೈಕೆ ಹಾಗೂ ಗುಣಮಟ್ಟದ ಪ್ರಸವಪೂರ್ವ ಆರೈಕೆ ಕಾರ್ಯಕ್ರಮದ, ಮಾರ್ಗದರ್ಶಿ ಕಿರುಪುಸ್ತಕಗಳು ಮತ್ತು ಭಿತ್ತಿಚಿತ್ರಗಳನ್ನು ಅವರು ಬಿಡುಗಡೆಗೊಳಿಸಿದರು.

<><><>

**ಬೆಳಗಾವಿ ಜಿಲ್ಲೆಯ** ಬರ ಪರಿಸ್ಥಿತಿ ಹಾಗೂ ನಿರ್ವಹಣೆ ಕುರಿತು, ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಖಾತೆ ಸಚಿವ, ಡಾಕ್ಟರ್ ಜಿ. ಪರಮೇಶ್ವರ, ಬೆಳಗಾವಿ ಜಿಲ್ಲಾಧಿಕಾರಿ ಸಭಾಂಗಣದಲ್ಲಿ, ಪರಿಶೀಲಿಸಿದರು. ಕುಡಿಯುವ ನೀರು, ಮೇವು, ಉದ್ಯೋಗ ಸೃಷ್ಟಿ ಸೇರಿದಂತೆ, ಬರ ನಿರ್ವಹಣೆಗೆ ಸಂಬಂಧಿಸಿದ, ಅಧಿಕಾರಿಗಳು ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಪಡೆದರು. ಸೂಕ್ತ ಮುನ್ನೆಚ್ಚರಿಕೆ ವಹಿಸುವಂತೆ, ಸಚಿವರು ಕಟ್ಟುನಿಟ್ಟಿನ

ಸೂಚನೆ ನೀಡಿದರು. ಬೆಳಗಾವಿಯ ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲು, ಸಚಿವರು ಬೆಳಗಾವಿಗೆ ಭೇಟಿ ನೀಡಿದ್ದರು.

<><><>

**ಬೆಂಗಳೂರಿನ, ತ್ರಿಪುರ ವಾಸಿನಿ,** ಅರಮನೆ ಮೈದಾನದಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಅಲ್ಪಸಂಖ್ಯಾತ ಸಮುದಾಯದ, ಕುಶಲಕರ್ಮಿಗಳ ಕರಕುಶಲ ಕಲೆಗಳ ಪ್ರದರ್ಶಿನಿ, ಕರ್ನಾಟಕ ಪರ್ವ-2026ಕ್ಕೆ ಚಾಲನೆ ನೀಡಲಿದ್ದಾರೆ. ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ ಆಯೋಜಿಸಿರುವ ಕಾರ್ಯಕ್ರಮದಲ್ಲಿ, ಉಪ ಮುಖ್ಯಮಂತ್ರಿ ಡಾಕ್ಟರ್ ಜಿ.ಪರಮೇಶ್ವರ, ವಿಧಾನ ಪರಿಷತ್ ಸಭಾಪತಿ ಸಲೀಂ ಅಹ್ಮದ, ಅಲ್ಪಸಂಖ್ಯಾತರ ಕಲ್ಯಾಣ ಖಾತೆ ಸಚಿವ ಯು.ಟಿ ಖಾದರ ಪಾಲ್ಗೊಳ್ಳಲಿದ್ದಾರೆ.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು,** ಆಕಾಶವಾಣಿ ಮೂಲಕ, ದೇಶದ ಜನತೆಯನ್ನುದ್ದೇಶಿಸಿ, ಹಂಚಿಕೊಳ್ಳುವ ತಮ್ಮ ಮನ್ ಕಿ ಬಾತ್ ಕಾರ್ಯಕ್ರಮ, ನಾಳೆ ಬೆಳಗ್ಗೆ 11 ಗಂಟೆಗೆ ಪ್ರಸಾರವಾಗಲಿದೆ. ಮನದ ಮಾತಿನ 138ನೇ ಸಂಚಿಕೆಯಾಗಿದೆ. ಹಿಂದಿ ಅವತರಣಿಕೆ ಬಳಿಕ, ಕನ್ನಡ ಸೇರಿದಂತೆ, ಇತರೆ ಪ್ರಾದೇಶಿಕ ಭಾಷೆಗಳಲ್ಲಿ, ಮನದ ಮಾತು, ಆಕಾಶವಾಣಿ, ದೂರದರ್ಶನ ಹಾಗೂ ನ್ಯೂಸ್ ಆನ್ ಏರ್ ಆಪ್ ಸೇರಿದಂತೆ, ವಿವಿಧ ಆನ್ಲೈನ್ ವೇದಿಕೆಗಳಲ್ಲೂ ನೇರವಾಗಿ, ಪ್ರಸಾರವಾಗಲಿದೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ** ಅವರು, ಸಾರ್ವಜನಿಕ ಸೇವೆಯ, 25 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಹಿನ್ನೆಲೆ, ಸೇವಾ ಸಂಕಲ್ಪ ಮಾಸಿಕ ಅಭಿಯಾನ ಅಕ್ಟೋಬರ್ 17ನೇ ತಾರೀಖಿನ ವರೆಗೆ, ದೇಶಾದ್ಯಂತ ಆಯೋಜಿವಾಗಿದೆ. ಮಹತ್ವದ, ಜನಪರ ಯೋಜನೆಗಳ ಕುರಿತು, ಜನ ಜಾಗೃತಿ ಸರಣಿ ಕಾರ್ಯಕ್ರಮಗಳನ್ನು, ಆಕಾಶವಾಣಿ ಬಿತ್ತರಿಸುತ್ತಿದೆ. ಇಂದಿನ ಸಂಚಿಕೆಯಲ್ಲಿ, 'ಕಾರ್ಮಿಕ ಸಂಹಿತೆ – 2025' ರ ಕುರಿತ, ಒಂದು ನೋಟ. ಈ ಹಿಂದೆ ಇಪ್ಪತ್ತೊಂಬತ್ತು ಪ್ರತ್ಯೇಕ ಕಾರ್ಮಿಕ ಕಾನೂನುಗಳಿದ್ದವು. ಕಳೆದ ಎಪ್ಪತ್ತು ವರ್ಷಗಳಿಂದ, ಉದ್ಯೋಗದಾತರಿಗೆ ಈ ಕಾನೂನುಗಳನ್ನು ಸಂಪೂರ್ಣವಾಗಿ ಪಾಲಿಸುವುದೇ ಕೆಲಸವಾಗಿತ್ತು, ಕಾರ್ಮಿಕರಿಗೆ ಕನಿಷ್ಟ ವೇತನ, ಕೈಗಾರಿಕೆ ಸಂಬಂಧಿ ವ್ಯವಾಹಾರಿಕ ಸಂಬಂಧಗಳು, ಸಾಮಾಜಿಕ ಭದ್ರತೆ ಮತ್ತು

ಔದ್ಯೋಗಿಕ ಸುರಕ್ಷತೆಯನ್ನು ಒಳಗೊಂಡ, ನಾಲ್ಕು ಕಾರ್ಮಿಕ ಸಂಹಿತೆಗಳು, 21 ನವೆಂಬರ್ 2025 ರಂದು, ಜಾರಿಗೆ ಬಂದವು. ಈ ಹಿಂದೆ ರಚಿತವಾಗಿದ್ದ ಕಾನೂನುಗಳನ್ನು-ನಿಯಮಾವಳಿಗಳನ್ನು ಸಮಗ್ರವಾಗಿ ಬದಲಿಸಿ, ನಿರ್ಧಿಷ್ಟ ಚೌಕಟ್ಟನ್ನು ಕೇಂದ್ರ ರೂಪಿಸಿತು. ಕಾನೂನು ಹಾಗೂ ನಿಯಮಾವಳಿಗಳ ಅನುಸರಣೆಗೆ ಸರಳೀಕೃತ ಸ್ವರೂಪ, ಕಿರು ಉದ್ಯಮಗಳಿಗೆ, ಹೆಚ್ಚು ಅನುಕೂಲ ಮತ್ತು ಅನುಸರಣೆಯ ಅನಗತ್ಯ ಭಾರವನ್ನು ಇಳಿಸುವಲ್ಲಿ ಸಹಕಾರಿಯಾಯಿತು. ಕಾರ್ಮಿಕ ಸಂಹಿತೆಗಳು ಎಲ್ಲ ಆಯಾಮಗಳಲ್ಲಿ, ರಕ್ಷಣೆ ಖಾತ್ರಿಪಡಿಸಿ, ಕಾರ್ಮಿಕರಿಗೆ ಕನಿಷ್ಠ ವೇತನ, ಗಿಗ್ ಮತ್ತು ಪ್ಲಾಟ್‌ಫಾರ್ಮ್ ಕಾರ್ಮಿಕರನ್ನು, ಮೊದಲ ಬಾರಿಗೆ ಸಾಮಾಜಿಕ ಭದ್ರತೆಯ ಪರಿಧಿಯೊಳಗೆ, ಪರಿಗಣಿಸಲಾಯಿತು. ಕಾನೂನಿನ ಮೂಲಕ ಸಾಮಾಜಿಕ ಸುರಕ್ಷತೆ, ಔದ್ಯೋಗಿಕ ವ್ಯಾಪ್ತಿ ವಿಸ್ತರಿಸಿ, 2025ರ ವೇಳೆಗೆ, ಶೇಕಡಾ 64 ಕ್ಕಂತ ಹೆಚ್ಚಾಯಿತು. ಏಕೀಕೃತ ಕಾರ್ಮಿಕ ಸಂಹಿತೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬೆಳಗಾವಿ ಪ್ರಾದೇಶಿಕ ವಿಭಾಗದ, ಉಪ ಕಾರ್ಮಿಕ ಆಯುಕ್ತ ಡಿ.ಜಿ ನಾಗೇಶ.

<><><>

**ಡಿ.ಜಿ ನಾಗೇಶ ಧ್ವನಿ – 51 ಸೆಕೆಂದುಗಳು**

<><><>

**ಸಂಕ್ಷಿಪ್ತ ಸುದ್ದಿಗಳು:**

**ಬೀದರ ಜಿಲ್ಲೆ, ಔರಾದ ತಾಲೂಕು, ಗುಡಪಳ್ಳಿ** ಗ್ರಾಮದಲ್ಲಿ ಜರುಗಿದ, ಜನಸ್ಪಂದನ ಕಾರ್ಯಕ್ರಮದಲ್ಲಿ, ಸ್ಥಗಿತಗೊಂಡಿದ್ದ ಗ್ರಾಮದ 85 ಜನರ ಪಿಂಚಣಿಗಳ ಪೈಕಿ, 65 ಜನರ ಪಿಂಚಣಿ ಅರ್ಜಿಗಳನ್ನು ಸ್ವೀಕರಿಸಿ, ಸಮಸ್ಯೆಗಳನ್ನು ಇತ್ಯರ್ಥ ಪಡಿಸಿದ್ದಾಗಿ, ಹಿರಿಯ ಸಿವಿಲ್ ನ್ಯಾಯಾಧೀಶ, ರಾಘವೇಂದ್ರ ಉಪಾಧ್ಯೆ ತಿಳಿಸಿದ್ದಾರೆ.

**ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ,** ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿರುವ, ಗಣಪತಿ ದೇವಸ್ಥಾನದ ಸಮೀಪ, ಇಂದು ಬೆಳಗ್ಗೆ 7 ಗಂಟೆಯಿಂದ, ಸಂಜೆ ನಾಲ್ಕು ಗಂಟೆಯ ವರೆಗೆ "ರೈತ ಸಂತೆ", ಜರುಗಲಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**'ಸಶಕ್ತ ಮಹಿಳೆ - ಸುಸ್ಥಿರ ಕೃಷಿ'** ಧ್ಯೇಯದ, ಧಾರವಾಡ ಕೃಷಿ ಮೇಳಕ್ಕೆ, ಇಂದು ಬೆಳಗ್ಗೆ 11 ಗಂಟೆಗೆ, ರಾಜ್ಯ ಮುಖ್ಯ ಕಾರ್ಯದರ್ಶಿ ಡಾಕ್ಟರ್ ಶಾಲಿನಿ ರಜನೀಶ, ಚಾಲನೆ.

**ಕೃಷಿಕ ಮಹಿಳೆಯರ** ಸಮಗ್ರ ಮಾರ್ಗದರ್ಶನಕ್ಕೆ, ಪ್ರತಿ ಗ್ರಾಮದಲ್ಲಿ 'ಕೃಷಿ ಸಖಿಯರು' – ಧಾರವಾಡ ಜಿಲ್ಲಾಧಿಕಾರಿ, ಆರ್. ಸ್ನೇಹಲ್,

**“ಸುರಕ್ಷಿತ ಮಾತೃತ್ವ ಆಶ್ವಾಸನ – SUMAN Roadmap 2030” – ತಾಯಂದಿರ ಮರಣ ಪ್ರಮಾಣ ಶೂನ್ಯಕ್ಕಿಳಿಸುವುದು, ಆರೋಗ್ಯ ಇಲಾಖೆ ಗುರಿ.**

**ಮನ್ ಕಿ ಬಾತ್;** ನಾಳೆ ಬೆಳಗ್ಗೆ 11 ಗಂಟೆಗೆ, 138ನೇ ಸಂಚಿಕೆ ಪ್ರಸಾರ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>